# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 174-ಹೆಚ್.ಎಸ್.ಆರ್ ಬಡಾವಣೆ,

## Ward DETER Commitee

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 12.08.2021 ರಂದು ಬೆಳಿಗ್ಗೆ 11.30 ಘಂಟೆಗೆ Ward DETER Commitee ಅನ್ನು 174-ಹೆಚ್.ಎಸ್.ಆರ್ ಬಡಾವಣೆ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ರಲ್ಲಿ ನಡೆಸಿದ್ದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಬಿ.ಚಂದ್ರಶೇಖರ್ | ವಾರ್ಡ್ ನೋಡಲ್ ಅಧಿಕಾರಿ ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) | 9448376415 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.174 | 7795356105 |
| 3 | ಶ್ರೀ ಬಿ.ಎಸ್.ಆರ್ ರೆಡ್ಡಿ | ಸದಸ್ಯರು | 9989000017 |
| 4 | ಶ್ರೀ ಹೆಚ್.ಇ.ಚಂದ್ರಶೇಖರ್ | ಸದ್ಯಸರು | 9880987339 |
| 5 | ಶ್ರೀಮತಿ ಎ.ಆರತಿ | ಸ್ವಯಂ ಸೇವಕರು | 8197226115 |
| 6 | ಶ್ರೀಮತಿ ಡಾ|| ಎಸ್ ಲಾವಣ್ಯ ಶೆಟ್ಟಿ | ಪ್ರಾ.ಆ.ಕೇಂ (ವೈದ್ಯರು) | 8971042985 |
| 7 | ಶ್ರೀ ಸಿ.ಪಿ. ಮಂಜುನಾಥ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ | 8277893126 |
| 8 | ಶ್ರೀ ವಿನೋದ್.ಜಿ | ಹಿ.ಆ.ಪ ವಾ.ಸಂ: 174 | 9844629911 |
| 9 | ಶ್ರೀ ಮಹೇಶ್. ಜೆ.ಆರ್ | ಅರಣ್ಯಾವಲಯಧಿಕಾರಿಗಳು | 9742612471 |
| 10 | ಶ್ರೀ ಯತೀಶ್. | ಸಹಾಯಕ ಅಭಿಯಂತರರು, ಬೆಸ್ಕಾಂ | 9449840476 |
| 11 | ಶ್ರೀ ಸಾಯಿಬಣ್ಣ | ಸ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) | 9845444039 |
| 12 | ಶ್ರೀಮತಿ ಸತ್ಯವಾಣಿ | ಕಿ.ಆ.ಪ ವಾ.ಸಂ: 174 | 8971434331 |
| 13 | ಶ್ರೀ ಹೆಚ್.ನರಸಪ್ಪ | ತೋಟಗಾರಿಕೆ ಸಹಾಯಕರು | 8105663239 |

- ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರು ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಲಾಗಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಸದ್ಯಸರು, ಸ್ವಯಂ ಸೇವಕರು ಮತ್ತು ಅಧಿಕಾರಿಗಳ ಸಹಾಕರದೊಂದಿಗೆ ಕೋವಿಡ್-19 ಹರಡುವಿಕೆಯು ಈ ವಾರ್ಡ್‌ನಲ್ಲಿ ಇಳಿಮುಖವಾಗಿದೆ ಎಂದು ತಿಳಿಸಿರುತ್ತಾರೆ.

Scanned with

- ಆರೋಗ್ಯ ಇಲಾಖೆ :-

  1. ರಾಜ್ಯಾಂದತ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ವಾರ್ಡ್ ಸಂಖ್ಯೆ: 174ರ ವ್ಯಾಪ್ತಿಯಲ್ಲಿ ಪ್ರಕರಣಗಳನ್ನು ತಡೆಗಟ್ಟಲು ಮುನ್ನಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸದಸ್ಯರಾದ ಬಿ.ಎನ್.ಆರ್ ರೆಡ್ಡಿ, ಚಂದ್ರಶೇಖರ ರೆಡ್ಡಿ ಮತ್ತು ಸ್ವಯಂ ಸೇವಕರು ವಾರ್ಡ್ ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಡಾ|| ಶ್ರೀಮತಿ ಎಸ್ ಲಾವಣ್ಯ ಶೆಟ್ಟಿ ರವರು ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರು ಬಿಬಿಎಂಪಿ ವತಿಯಿಂದ ವೈದ್ಯರ ತಂಡವನ್ನು ರಚಿಸಲಾಗಿದ್ದು, ತಂಡದಲ್ಲಿ Para Medical ರವರು, ನರ್ಸಗಳು, ವೈದ್ಯರು ಸೇರಿದಂತೆ ಒಟ್ಟು 5 ಜನ ರವರುಗಳು ಮನೆ ಮನೆಗೆ ತರಳಿ ಕುಟುಂಬದ ಆರೋಗ್ಯ ಮಾಹಿತಿ ಪಡೆಯಲ್ಲಿದ್ದಾರೆ ಎಂದು ಸಭೆಯಲ್ಲಿ ತಿಳಿಸಿದ್ದರು.
  2. ಸರ್ಕಾರವು ಪ್ರಸ್ತಾಪಿಸಿದಂತೆ ಬಿಪಿಎಲ್ ಕಾರ್ಡ್ ಹೊಂದಿರುವವರು ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಮರಣ ಹೊಂದಿದ್ದರೆ, ಅಂತಹ ಕುಟುಂಬದ ಸದ್ಯಸರಿಗೆ ರೂ 1.00 ಲಕ್ಷಗಳ ಪರಿಹಾರ ಸಹಾಯ ಧನವನ್ನು ಘೋಷಣೆ ಮಾಡಿದ್ದು, ಇದರ ಬಗ್ಗೆ ಎಲ್ಲ ದಾಖಲೆಗಳನ್ನು ನೀಡಬೇಕೆಂದು ಬಿ.ಎನ್.ಆರ್ ರೆಡ್ಡಿ, ಚಂದ್ರಶೇಖರ ರೆಡ್ಡಿ ಮತ್ತು ಸ್ವಯಂ ಸೇವಕರು ವಾರ್ಡ್ ಸಭೆಗೆ ತಿಳಿಸಿದ್ದು, ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಜಿಲ್ಲಾ ವೈದ್ಯಾಧಿಕಾರಿಗಳು ನೀಡಿರುವ ಮೃತ ವ್ಯಕ್ತಿಗಳ ಮಾಹಿತಿಯ ಆಧಾರದ ಮೇಲೆ ಮೃತ ಕಾನೂನು ಬದ್ಧ ವಾರಸುದಾರರನ್ನು/ಕುಟುಂಬ ಸದಸ್ಯರನ್ನು ನಿಯಮಾನುಸಾರ ಗುರುತಿಸಿ, ದೃಢೀಪಡಿಸಿಕೊಂಡ ನಂತರವಷ್ಟೇ ಮೃತರು ಕಾನೂನು ಸಮ್ಮತ ವಾರಸುದಾರಿಂದ ಅಧಿಕೃತ ಗುರುತು ಪತ್ರ ಮತ್ತು ಬ್ಯಾಂಕ್ ವಿವರಗಳನ್ನು ಜಿಲ್ಲಾಧಿಕಾರಿಗಳು ಪಡೆದು ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಇಲಾಖೆ ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು ಎಂಬ ಸಭೆಯಲ್ಲಿ ತಿಳಿಸಿರುತ್ತಾರೆ.
  3. ವಾರ್ಡ್ ವ್ಯಾಪ್ತಿಯ 5ನೇ ಮುಖ್ಯ, 17ನೇ ಅಡ್ಡ ರಸ್ತೆ, ಪಾದಚಾರಿ ಮಾರ್ಗದ ತಳ್ಳುವ ಗಾಡಿಗಳಲ್ಲಿ ವ್ಯಾಪಾರ ನಡೆಸುತ್ತಿದ್ದು ಇವುಗಳನ್ನು ತೆರವುಗೊಳಿಸುವಂತೆ ಬಿ.ಎನ್.ಆರ್ ರೆಡ್ಡಿ, ಚಂದ್ರಶೇಖರ ರೆಡ್ಡಿ ಮತ್ತು ಸ್ವಯಂ ಸೇವಕರು ವಾರ್ಡ್ ಸಭೆಗೆ ತಿಳಿಸಿದ್ದು, ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಪಾದಚಾರಿ ಮಾರ್ಗ ತೆರವುಗೊಳಿಸಲು ಕಾರ್ಯಚರಣೆ ಹಮ್ಮಿಕೊಂಡು ತೆರವುಗೊಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

- ವಿದ್ಯುತ್ ಇಲಾಖೆ ಬಿಬಿಎಂಪಿ

  1. ವಾರ್ಡ್ ವ್ಯಾಪ್ತಿಯ 6ನೇ ಸೆಕ್ಟರ್, 5ನೇ ಮುಖ್ಯ ರಸ್ತೆ ಸಿಗ್ನಲ್‌ನಿಂದ ಸಲಾರ್ ಪುರಿಯಾ ಅಪಾರ್ಟಮೆಂಟ್ ವರೆಗೆ ಬೀದಿ ದೀಪ ನಿರ್ವಹಣೆ ಮಾಡುವಂತೆ ಬಿ.ಎನ್.ಆರ್ ರೆಡ್ಡಿ, ವಾರ್ಡ್ ಸಭೆಗೆ ತಿಳಿಸಿದ್ದು, ಈ ಬಗ್ಗೆ ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ ರವರ ಪರವಾಗಿ ಸಭೆಯಲ್ಲಿ ಹಾಜರಿದ್ದ ಬೀದಿ ದೀಪ ನಿರ್ವಾಹಕರು ಪರಿಶೀಲಿಸಿ ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ತಿಳಿದ್ದರು.
  2. ವಾರ್ಡ್ ವ್ಯಾಪ್ತಿಯ 2ನೇ, 3ನೇ ಮತ್ತು 7ನೇ ಸೆಕ್ಟರ್‌ಗಳಲ್ಲಿ ಬೀದಿ ದೀಪ ನಿರ್ವಹಣೆ ಮಾಡಲು ಮತ್ತು ಟೈಮರ್ ಅಳವಡಿಸಲು ಶ್ರೀ ಚಂದ್ರಶೇಖರ ಸದಸ್ಯರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ ರವರು ಸಭೆಗೆ ಗೈರು ಆಗಿರುವುದರಿಂದ ಮುಂದಿನ ಸಭೆಗೆ ಬೀದಿ ದೀಪ ನಿರ್ವಾಹಕರ ಜೊತೆಯಲ್ಲಿ ಸಭೆಗೆ ಹಾಜರಾಗುವಂತೆ ಅಧ್ಯಕ್ಷರು/ನೋಡಲ್ ಅಧಿಕಾರಿಗಳು ರವರು ಸೂಚಿಸಿರುತ್ತಾರೆ.

- ಬೆಸ್ಕಾಂ

  1. ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ವಿಭಾಗದಿಂದ ಕಾಮಗಾರಿ ಪೂರ್ಣಗೊಂಡಿದ್ದು, ಎಲ್ಲಾ ಕಡೆ ಡೆಬ್ರಿಸ್ ಸ್ಥಳದಲ್ಲಿ ಹಾಕಿರುವುದಾಗಿ ಬಿ.ಎನ್.ಆರ್ ರೆಡ್ಡಿ, ಚಂದ್ರಶೇಖರ ರೆಡ್ಡಿ ಮತ್ತು ಸ್ವಯಂ ಸೇವಕರು ವಾರ್ಡ್ ಸಭೆಗೆ ತಿಳಿಸಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಮತ್ತು ಸಹಾಯಕ ಅಭಿಯಂತರರು, ಶೀಘ್ರವಾಗಿ ತೆರವುಗೊಳಿಸುವುದಾಗಿ ತಿಳಿಸಿದ್ದರು.
  2. ಹೆಚ್.ಎಸ್.ಆರ್ ಬಡಾವಣೆಯಲ್ಲಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುತ್ತಿದ್ದು, ಈ ಬಗ್ಗೆ ಸಾರ್ವಜನಿಕರ ಗಮನಕ್ಕೆ ತರಲು ದೈನಂದಿನ ಪತ್ರಿಕೆಯಲ್ಲಿ ಮುಂಚಿವಾಗಿ ಮಾಹಿತಿ ನೀಡುವಂತೆ ಹಾಗೂ ಪತ್ರಿಕೆಗಳಲ್ಲಿ ಪ್ರಕಟಿಸಿರುವ ಸುದ್ದಿಯು ಸಕಾಲದಲ್ಲಿ ಲಭ್ಯವಾಗುತ್ತಿಲ್ಲ ಒಂದು ದಿನದ ನಂತರ ಪ್ರಕಟವಾಗುತ್ತಿದ್ದೆ ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿದೆ ಎಂದು ವಾರ್ಡ್ ಸದಸ್ಯರಾದ ಚಂದ್ರಶೇಖರ ಮತ್ತು ಬಿ.ಎನ್.ಆರ್ ರೆಡ್ಡಿ ಮತ್ತು ಸ್ವಯಂ ಸೇವಕರು ತಿಳಿಸಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರು ಬೆಸ್ಕಾಂ ರವರು ಸಭೆಯಲ್ಲಿ ತಿಳಿಸಿದ್ದರು.

Scanned with

3. ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿಗಳು ನೇತಾಡುತ್ತಿದ್ದು, ಇವುಗಳನ್ನು ಕೂಡಲೇ ದುರಸ್ಥಿ ಪಡಿಸುವಂತೆ ವಾರ್ಡ್ ಸದಸ್ಯರಾದ ಚಂದ್ರಶೇಖರ ಮತ್ತು ಬಿ.ಎಸ್.ಆರ್ ರೆಡ್ಡಿ ಮತ್ತು ಸ್ವಯಂ ಸೇವಕರು ತಿಳಿಸಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರು ಬೆಸ್ಕಾಂ ರವರು ಸಭೆಯಲ್ಲಿ ತಿಳಿಸಿದ್ದರು.

4. ವಾರ್ಡ್ ವ್ಯಾಪ್ತಿಯ, 17ನೇ ಮುಖ್ಯ ರಸ್ತೆ ಜಕ್ಷನ್ 18ನೇ ಅಡ್ಡ ರಸ್ತೆ, ಟ್ರಾನ್ಸ್‌ಫಾರ್ಮರ್‌ಗೆ ಗಿಡಬಳ್ಳಿಗಳು ಸುತ್ತಲು ಆವರಿಸಿದ್ದು ಮತ್ತು ಅನಗತ್ಯವಾಗಿ Structure ನಿರ್ಮಿಸಿದ್ದು, ಇದನ್ನು ಸ್ವಚ್ಛಗೊಳಿಸುವಂತೆ ಹಾಗೂ ಗಿಡಬಳ್ಳಿಗಳನ್ನು ತೆರವುಗೊಳಿಸುಲು ವಾರ್ಡ್ ಸದಸ್ಯರಾದ ಚಂದ್ರಶೇಖರ ಮತ್ತು ಬಿ.ಎಸ್.ಆರ್ ರೆಡ್ಡಿ ಮತ್ತು ಸ್ವಯಂ ಸೇವಕರು ತಿಳಿಸಿದ್ದು, ಈ ಬಗ್ಗೆ ಟ್ರಾನ್ಸ್‌ಫಾರ್ಮರಗೆ ಹೊಂದಿಕೊಂಡಿರುವ ಗಿಡಬಳ್ಳಿಗಳನ್ನು ತೆರವುಗೊಳಿಸಲಾಗುವುದೆಂದು ಶೀಘ್ರದಲ್ಲೆ ಕ್ರಮ ಕೈಗೊಳ್ಳಲಾಗುವುದೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರು ಬೆಸ್ಕಾಂ ರವರು ಸಭೆಯಲ್ಲಿ ತಿಳಿಸಿದ್ದರು.

5. ವಾರ್ಡ್ ವ್ಯಾಪ್ತಿಯ, 17ನೇ ಮುಖ್ಯ ರಸ್ತೆಯಲ್ಲಿರುವ ಟ್ರಾನ್ಸ್‌ಫಾರ್ಮರ್‌ನಲ್ಲಿ ಆಯಿಲ್ ಸೋರುತ್ತಿದ್ದು, ಇದನ್ನು ದುರಸ್ಥಿಪಡಿಸುವಂತೆ ವಾರ್ಡ್ ಸದಸ್ಯರಾದ ಚಂದ್ರಶೇಖರ ಮತ್ತು ಬಿ.ಎಸ್.ಆರ್ ರೆಡ್ಡಿ ಮತ್ತು ಸ್ವಯಂ ಸೇವಕರು ತಿಳಿಸಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರು ಬೆಸ್ಕಾಂ ರವರು ಸಭೆಯಲ್ಲಿ ತಿಳಿಸಿದ್ದರು.

6. ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ವಿಭಾಗದಿಂದ ಕೇಬಲ್‌ಗಳನ್ನು ಕಂಬಗಳಿಗೆ ಹಾಗೂ ಮರಗಳಿಗೆ ಸುತ್ತಿದ್ದು, ಇವುಗಳನ್ನು ತೆರವುಗೊಳಿಸುವಂತೆ ಕ್ರಮವಹಿಸಲು ವಾರ್ಡ್ ಸದಸ್ಯರಾದ ಚಂದ್ರಶೇಖರ ಮತ್ತು ಬಿ.ಎಸ್.ಆರ್ ರೆಡ್ಡಿ ಮತ್ತು ಸ್ವಯಂ ಸೇವಕರು ತಿಳಿಸಿದ್ದು, ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಬಿ.ಎಂ.ಪಿ. ಬೆಸ್ಕಾಂ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಕಾರದೊಂದಿಗೆ ಸರ್ವೆ ಮಾಡಿ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದ್ದರು.

ಅಂತಿಮವಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ರವರು, ವಾರ್ಡ್ ನಂ. 174 ಹಾಗೂ ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ರವರು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

12/8/2021
ಕಾರ್ಯದರ್ಶಿ, ವಾರ್ಡ್ ನಂ.174ರ
ಸಹಾಯಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

12/8/2021
ಅಧ್ಯಕ್ಷರು/ನೋಡಲ್ ಅಧಿಕಾರಿ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with